Electrification of Villages

209. Sri R. N. LAKSHMIPATHI (Gauribidanur).—

Will the Chief Minister be pleased to state :—

(*a*) the number of villages electrified so far in Gauribidanur ;

(*b*) out of the electrified villages, the number of villages in respect of which electric power has been disconected for non-payment of electricity charges ?

A.—Sri D. PARAMESWARAPPA (Deputy Minister for Major Irrigation and Electricity).—

(*a*) 158.

(*b*) 4.

ಶ್ರೀ ಆರ್. ಎನ್. ಲಕ್ಷ್ಮಿಪತಿ.—ನಾನು ಈ ಪ್ರಶ್ನೆಯನ್ನು ಕಳುಹಿಸಿದಾಗ ಅನೇಕ ಹಳ್ಳಿಗಳಲ್ಲಿ ದೀಪ ಇರಲಿಲ್ಲ. ಅದಕ್ಕೆ ಕಾರಣ ಅವರಿಗೆ ಬಿಲ್ಲುಗಳನ್ನು ಕಟ್ಟಲು ದುಡ್ಡು ಇರಲಿಲ್ಲ ಅನ್ನುವುದೇ ಆಗಿದೆ. ಆದರೆ ದೀಪಗಳನ್ನು ಕೇಳತಕ್ಕ ಕಾಲದಲ್ಲಿ ಇದ್ದ ಉತ್ಸಾಹ ಉಮೇದುಗಳು ದುಡ್ಡು ಕಟ್ಟುವ ಕಾಲಕ್ಕೆ ಇರುವುದಿಲ್ಲ. ಆದ್ದರಿಂದ ನೇರವಾಗಿ ಆ ಗ್ರಾಮಪಂಚಾಯತಿಗಳಿಂದಲೇ ವಸೂಲ್ಮಾಡಿ ಕೊಳ್ಳುವುದಕ್ಕೆ ಏಕೆ ಪ್ರಯತ್ನಮಾಡಬಾರದು ?

† Sri D. PARAMESWARAPPA.—That is a suggestion for action.

Sri H. SIDDAVEERAPPA.—Has it not come to the notice of the Government that electricity has been disconnected in nearly 50% of the villages because of the fact they have not paid the charges ? Is it not a waste of capital invested on such projects ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಕೇಳುತ್ತಿರುವ ವಿಷಯ ನನ್ನ ಗಮನಕ್ಕೂ ಬಂದಿದೆ. ಈ ಬಗ್ಗೆ ಒಂದು ತಿದ್ದುಪಡಿಯನ್ನು ತಾಲ್ಲೂಕ್ ಬೋರ್ಡ್ ಮತ್ತು ಗ್ರಾಮಪಂಚಾಯಿತಿಗಳ ಆಕ್ಟಿನಲ್ಲಿ ಸೇರಿಸುವುದಕ್ಕೆ ಅವಕಾಶ ಇದೆಯೇ ಎಂಬುದನ್ನು ಲಾ ಇಲಾಖೆಯವರಿಂದ ಪರಿಶೀಲನೆ ಮಾಡಿಸುತ್ತಿದ್ದೇವೆ. ಅದು ಬಂದ ನಂತರ ನೋಡೋಣ.

Amount provided for Medicine to Hospitals

210. Sri J. P. SARWAGH (Sedam).—

Will the Minister for Health be pleased to state :—

(*a*) the total amount provided for Medicine yearly to the Government Hospitals that are situated in Taluk proper in Gulbarga District; (Information on each Government Hospital with allotment be given) ;

(*b*) the number of patients that come for treatment to each Hospital in a year (talukwise information may please be provided) ?

A.—Sri Y. RAMAKRISHNA (Minister for Health).—

(*a*) *Vide* statement appended.

(*b*) *Vide* statement appended.

(SRI Y. RAMAKRISHNA)

STATEMENT

Details of Taluk Headquarters Hospitals in Gulbarga District and the total amount provided for Medicine yearly to these Hospitals.

Taluk	Institution	Amount provided for Medicine per annum.		No. of patients that come to each Hospital for treatment (annual figures)
Afzalpur	C. D. Afzalpur	Rs.	1,200	3,650
Sedam	C. D. Sedam	Rs.	1,200	45,625
Chittapur	C. D. Chittapur	Rs.	1,200	44,530
Yadgir	C. D. Yadgir	Rs.	2,000	1,02,200
Jewergi	C. D. Jewergi	Rs.	1,200	17,155
Shorapur	C. D. Shorapur	Rs.	10,000	59,130
Shahapur	C. D. Shahapur	Rs.	1,200	38,690
Chincholi	C. D. Chincholi	Rs.	1,200	26,645
Alland	M & H U Alland	Rs.	1,200	23,440
Gulbarga	Civil Hospital (under District Surgeon)	Rs.	1,50,000	1,97,067

1-00 P.M.

There is one mistake in the statement. According to the old Government order, the Statement is brought forward. According to the new Government order, the statement should be like this :

		Rs.
Azalpur for 3 Hospitals	...	11,000
Aland for 2 Hospitals	...	13,000
Chincholi for 2 Hospitals	...	9,000
Chitapur for 4 Hospitals	...	16,000
Gulbarga for 3 Hospitals	...	11,000
Jeevargi for 3 Hospitals	...	13,000
Sedam for 3 Hospitals	...	11,000
Shahapur	...	13,000
Shorapur	...	16,000
Yadgiri for 3 Hospitals	...	18,500

SRI AZEEZ SAIT.—The Hon'ble Minister should have circulated this information among the members. He cannot come out with this information now. It would have been easy for members to put questions if it had been circulated among the members.

Mr. SPEAKER.—The answers might have been printed before this information was got and now the answers have been rectified. There is nothing wrong in it. In the Lok Sabha only oral answers are given and the printed answers are not circulated there. But I do not know what rules in this respect are going to be adopted by this House.

Sri J. P. SARWESH.—I would like to know whether you have included those hospitals which are Centrally sponsored?

Sri Y. RAMAKRISHNA.—Only the Taluk Hospitals are included.

ಶ್ರೀ ಎಂ. ನಾಗಪ್ಪ.—ಈ ಔಷಧಾಲಯಗಳಿಗೆ ಔಷಧಕ್ಕಾಗಿ ಹಣ ಕೊಡುತ್ತಾ ಇದ್ದೀರಿ, ಅದಕ್ಕೇನಾದರೂ ಹೇಷಂಟು ಇಷ್ಟು ಜನ ಇರಬೇಕು ಅಂತ ಆಗಲಿ ಅಥವಾ ಇನ್ನೇನಾದರೂ ಕ್ರೈಟೀರಿಯಾ ಇದೆಯೇ? ಅಥವಾ ನಿಮ್ಮ ಎಂಎಸ್ ಅಂಡ್ ಫ್ಯಾನ್ಸಿ ಮೇಲೆ ಹಣ ಕೊಡಲಾಗುತ್ತಿದೆಯೇ?

ಶ್ರೀ ವೈ. ರಾಮಕೃಷ್ಣ.—16-4-68ರ ಗವರ್ನಮೆಂಟ್ ಆರ್ಡರ್ ಪ್ರಕಾರ ಪ್ರತಿಯೊಂದು ತಾಲ್ಲೂಕು ಹೆಡ್‌ಕ್ವಾರ್ಟರ್ಸ್ ಆಸ್ಪತ್ರೆಗಳಿಗೂ 7,500 ರೂಪಾಯಿ ಔಷಧಿಗಳನ್ನು, ಹೋಬಳಿ ಆಸ್ಪತ್ರೆಗಳಿಗೆ 5,000 ರೂಪಾಯಿ ಔಷಧಿಗಳನ್ನು, ಹೋಬಳಿ ಲೆವೆಲ್‌ಗಿಂತ ಕಡಿಮೆ ದರ್ಜೆಯ ರೋಕಲ್ ಡಿಸ್ಪೆನ್ಸರಿಯಾದರೆ 4,000 ರೂಪಾಯಿ, ಪ್ರೈಮರಿ ಹೆಲ್ತ್ ಸೆಂಟರುಗಳಿಗೆ 4 ಸಾವಿರ ರೂಪಾಯಿ, ಜನರಲ್ ಹಾಸ್ಪಿಟಲ್‌ಗಳಿಗೆ 15,000 ರೂಪಾಯಿ ಔಷಧಿಗಳಿಗಾಗಿ ಕೊಡಬೇಕೆಂದು ಸರ್ಕಾರದ ಆರ್ಡರ್ ಆಗಿದೆ, ಅದನ್ನು ಜಾರಿಗೆ ಕೊಟ್ಟಿದ್ದೇವೆ.

ಶ್ರೀ ಶರಣಗೌಡ ಇನಾಂದಾರ್.—ತಾವು ಈಗ ಒದಗಿಸಿದಂತಹ ಹಣದ ಅಂಕಿ ಅಂಶ ನೋಡಿದರೆ ಇದು ಸರಿಹೋಗುವುದಿಲ್ಲ ಅನ್ನುವಂತಹ ದೂರು ಸರ್ಕಾರದವರಿಗೆ ಬಂದಿದೆಯೇ? ಬಂದಿದ್ದರೆ ಅದರ ಬಗ್ಗೆ ಏನು ಯೋಚನೆ ಮಾಡುತ್ತಾ ಇದ್ದೀರಿ?

ಶ್ರೀ ವೈ. ರಾಮಕೃಷ್ಣ.—ಈಗ ಹೇಳಿದ್ದು ಕಳೆದ 16-4-68ರ ಗವರ್ನಮೆಂಟ್ ಆರ್ಡರ್ ಪ್ರಕಾರ ಮಾಡಿರುವುದು. ಮಾನ್ಯ ಸದಸ್ಯರು ಹೇಳತಕ್ಕ ಪ್ರತಿಯೊಂದು ಅಂಶವನ್ನೂ ಗಮನದಲ್ಲಿಟ್ಟುಕೊಂಡು ರ್ಯಾಷನಲ್ ಬೇಸಿಸ್ ಮೇಲೆ ಒಂದು ಗವರ್ನಮೆಂಟ್ ಆರ್ಡರ್ ಹೊರಡಿಸಿದ್ದೇವೆ.

ಶ್ರೀ ಅಜೀಜ್ ಸೇಟ್.—ಮಂತ್ರಿಗಳು ಔಷಧಿಗೆ ಒದಗಿಸಲಾದ ಮೊಬಲಗಿನ ವಿಚಾರದಲ್ಲಿ ತಿದ್ದುಪಡಿಯನ್ನು ಸೂಚಿಸಿದರು. ಆಸ್ಪತ್ರೆಗಳಿಗೆ ಬರುವ ರೋಗಿಗಳ ಸಂಖ್ಯೆಯು ಕೊಟ್ಟಿರುವುದು ಸರಿಯಾಗಿದೆಯೇ?

ಶ್ರೀ ವೈ. ರಾಮಕೃಷ್ಣ.—ಸರಿಯಾಗಿದೆ.

Sri D. B. KALMANKAR.—There is a variation in the number of patients in the different dispensaries in the various taluks, but the amount provided is more or less same. Will the Government consider the question of allotting more funds in view of the necessity for dispensaries?

Sri Y. RAMAKRISHNA.—We will have to watch and see.

ಶ್ರೀ ಎಸ್. ಎಂ. ಗುರೆಡ್ಡಿ.—16-4-68ರ ಸರಕಾರಿ ಆಜ್ಞೆ ಮುಂಬಯಿ ಕರ್ನಾಟಕಕ್ಕೂ ಅನ್ವಯಿಸುವುದೇ?

ಶ್ರೀ ವೈ. ರಾಮಕೃಷ್ಣ.—ಮೈಸೂರು ಸಂಸ್ಥಾನದಲ್ಲಿರುವ ಎಲ್ಲಾ ಆಸ್ಪತ್ರೆಗಳಿಗೂ ಅನ್ವಯಿಸುವುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—16-4-68ರ ಗವರ್ನಮೆಂಟ್ ಆರ್ಡರಿನ ಪ್ರಕಾರ ತಾಲ್ಲೂಕು ಆಸ್ಪತ್ರೆಗಳಿಗೆ ಕೊಡಲಾಗುತ್ತಿದೆಯೇ?

ಶ್ರೀ ವೈ. ರಾಮಕೃಷ್ಣ.—ಕೊಡುತ್ತಿದೆ.

ಶ್ರೀ ನದಾಶಿವಪ್ಪ ಪಾಟೀಲ್.—ಗುಲ್ಬರ್ಗ ಜಿಲ್ಲೆಗೆ ಅಲಾಟ್ ಮಾಡುವ ಔಷಧಿಗಳನ್ನು ಆಸ್ಪತ್ರೆಗಳಿಗೆ ಹೋಗುವ ರೋಗಿಗಳಿಗೆ ಸರಿಯಾಗಿ ಡಾಕ್ಟರುಗಳು ಕೊಡದಿರುವುದರಿಂದ ರೋಗಿಗಳು ಬೇರೆ ಕಡೆ ಹೋಗಿ ಔಷಧಿ ತೆಗೆದುಕೊಳ್ಳುತ್ತಿರುವುದು ಗಮನಕ್ಕೆ ಬಂದಿದೆಯೇ?

ಶ್ರೀ ವೈ. ರಾಮಕೃಷ್ಣ.—ಈಗ ಎಷ್ಟು ಮೇಲ್ಬಿಚಾರಣೆ ನಡೆಸಬೇಕೋ ಅಷ್ಟನ್ನು ನಡೆಸುತ್ತಿದೆ. ತಪ್ಪು ಮಾಡಿರುವ ನಿದರ್ಶನಗಳಿದ್ದರೆ ಅದನ್ನು ಬರೆದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

Sri V. N. PATIL.—Will the Hon'ble Minister agree that there is no scientific criteria or basis applied for allotment of funds? Whereas for Afzalpur the number of patients is 36,501 the entire allotment seems to be 11,000; in Yadgir the number of patients is one lakh and odd, the allotment continues to be the same Rs. 11,000: how do you justify this?

Sri Y. RAMAKRISHNA.—Taxing into account all these factors, we have made this Government Order, only last month. After gaining experience of the working of this Government Order, we are prepared to modify it in future.

Mr. SPEAKER.—Now I put question No. 200.

Tubes, Tyres and Motor Spare Parts

200. **Sri C. M. S. SASTRY** (Chickmagalur).—

Will the Minister for Industries, Information and Publicity be pleased to state :—

(*a*) whether the Government is aware of the non-availability of tubes, tyres and other motor spare parts at reasonable rates, in the open market ;

(*b*) whether the Government is aware that these articles are available if exhorbitant price is paid for them ;

(*c*) whether the Government is aware that the goods sold in the market are of inferior quality ;

(*d*) the steps taken by the Government to control blackmarketing and to check the quality of such goods sold in the market ?

A.—**Sri M. RAJASEKHARA MURTHY** (Minister for Industries, Information and Publicity).—

(*a*) No.

(*b*) No.

(*c*) No.

(*d*) Does not arise.

Sri H. SIDDAVEERAPPA.—I am confining my question only with regard to tractor tyres and tubes. Has it come to the notice of the Government that most of the tractors where agriculturists have paid nearly Rs. 40,000 or Rs. 50,000 per tractor, they have already been dismantled and they have become unserviceable because no tyres and tubes are available ?